**ದಿಃ 20.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ವಕಿಲರಿಂದಃ**

ಈಗ ತೋರಿಸುತ್ತಿರುವ ನಿಪಿ 1 ನನ್ನದೇ. ಅದರಲ್ಲಿರುವ ಸಹಿ ನನ್ನದೇ ಆದರೆ ದಿನಾಂಕ ಮೊತ್ತ ಅದನ್ನು ನಾನು ನಮೂದು ಮಾಡಿರುವುದಿಲ್ಲ. ನಾನು ಬಿ ಜೆ ಎಸ್ ಸೊಸೈಟಿಯಲ್ಲಿ ವ್ಯವಹಾರ ಮಾಡುತ್ತಿದ್ದೆ ಆಗ ಪಿರ್ಯಾದುದಾರರನ್ನು ನೋಡಿರುತ್ತೇನೆ. ಅಲ್ಲ ವ್ಯಾಪಾರಕ್ಕಾಗಿ ಸಾಲವನ್ನು ನೀಡುತ್ತಾರೆ. ಸಾಲವನ್ನು ಪಡೆದುಕೊಳ್ಳುವುದಕ್ಕೆ ಮುಂಚೆ ಪಿರ್ಯಾದುದಾರರ ಪರಿಚಯ ಇರುವುದಿಲ್ಲ. ನಾವು ಪಿಗ್ನಿ ಕಲೆಕ್ಷನ್ ಮೇರೆಗೆ ಅಧ್ಯಕ್ಷರನ್ನು ಭೇಟಿ ಮಾಡಿರುತ್ತೇನೆ. ಸಾಲ ಪಡೆದುಕೊಳ್ಳುವುದಕ್ಕಿಂತ ಮುಂಚೆ ಪಿಗ್ನಿಯಲ್ಲಿ ಹಣವನ್ನು ಕಟ್ಟಿ ಎಂದು ಹೇಳಿರುತ್ತಾರೆ. 2017-18 ರಿಂದ ವ್ಯವಹಾರ ಮಾಡುತ್ತಿರುತ್ತೇನೆ. 2018 ರ ತನಕ ಮತ್ತು 2019 ರ ಮಧ್ಯದ ವರೆಗೂ ಮಾಡಿರುತ್ತೇನೆ. 200 ರೂ 500 ರೂ 1000 ರೂ ಗಳಂತೆ ಕಟ್ಟಿರುತ್ತೇನೆ. ಒಟ್ಟು ಮೊತ್ತ ಎಷ್ಟು ಕಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಕೇಳಿದಾಗ ಹೇಳಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಶ್ರವಣಬೆಳಗೂಳ ಕೆಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹತ್ತಿರ ಮೊಬೈಲ್ ಶಾಪ್ ಇಟ್ಟುಕೊಂಡಿದ್ದೆ. 2016 ರಿಂದ 2018-19 ರ ವರೆಗೆ ಇಟ್ಟುಕೊಂಡಿರುತ್ತೇನೆ. ನಂತರ ನಾನು 2019 ರಲ್ಲಿ ಬೆಂಗಳೂರಿಗೆ ಹೋಗಿರುತ್ತೇನೆ. ನಾನು ರಾಘು ರವರ ಮುಖೇನ ಬ್ಯಾಂಕಿಗೆ ಹೋಗಿರುತ್ತೇನೆ. ಆವಾಗಿನಿಂದ ನನಗೆ ಅಧ್ಯಕ್ಷರು ಪರಿಚಯ. 2018 ರಲ್ಲಿ ನನಗೆ 2 ಲಕ್ಷ ರೂ ಸಾಲವನ್ನು ಕೊಟ್ಟಿರುತ್ತಾರೆ. 2 ಲಕ್ಷ ಹಣದಲ್ಲಿ ಶೇ. 70 ಭಾಗ ಪಾವತಿ ಮಾಡಿರುತ್ತೇನೆ ಉಳಿದ ಶೇ. 30 ಭಾಗ ಪಾವತಿ ಮಾಡಬೇಕು . 2018 ರಲ್ಲಿ ಸಾಲವನ್ನು ಪಡೆದುಕೊಂಡು 2018 ರ ವರೆಗೂ ಸಾಲವನ್ನು ಮರುಪಾವತಿ ಮಾಡಿರುತ್ತೇನೆ. 2018 ರ ಯಾವ ತಿಂಗಳಂದು ಯಾವ ದಿನಾಂಕ ದಂದು ಸಾಲವನ್ನು ಕೊಟ್ಟಿರುತ್ತಾರೆ ಎಂದು ನೆನಪಿಲ್ಲ. 2018 ರ ಕೊನೆ ಭಾಗ ಹಾಗೂ 2019 ರ ಮೊದಲ ತಿಂಗಳಲ್ಲಿ ಹಣವನ್ನು ಕಟ್ಟಿರುತ್ತೇನೆ. ನಾನು 1ಲಕ್ಷ 20 ಸಾವಿರ – 1 ಲಕ್ಷ 50 ಸಾವಿರ

ವರೆಗೆ ಪಾವತಿ ಮಾಡಿರುತ್ತೇನೆ. ಕೆಲಮೊಮ್ಮೆ ನಾನು ಪೋನ್ ಮುಖೇನ ಹಣವನ್ನು ಕಟ್ಟಿರುತ್ತೇನೆ. 2024 ರಲ್ಲಿ ಫೋನ್ ಪೇ ಮಾಡಿರುತ್ತೇನೆ. 2024 ರಲ್ಲಿ 30ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಪಾವತಿ ಮಾಡಿರುತ್ತೇನೆ. ಕಲೆಕ್ಷನ್ ಮಾಡಲು ಬರುತ್ತಿದ್ದ ಹೇಮಂತರವರ ಫೋನ್ ಗೆ ಪಾವತಿ ಮಾಡಿರುತ್ತೇನೆ. ನನ್ನ ಫೋನ್ ಮುಾಲಕ ಮಾಡಿರುತ್ತೇನೆ. ಅದರ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಡಲು ಸಾಧ್ಯ ಇದೆ. ಬ್ಯಾಂಕಿಗೆ ಹೊಗಿ 30 ಸಾವಿರ ಕೊಟ್ಟ ಬಗ್ಗೆ ರಶೀದಿಯನ್ನು ಕೊಡುವಂತೆ ವಿಚಾರಿಸಿರುತ್ತೇನೆ ಆದರೆ ಅವರು ಕೊಟ್ಟಿರುವುದಿಲ್ಲ. 2024 ರಲ್ಲಿ ವಿಚಾರಿಸಿರುತ್ತೇನೆ ನಿರ್ದಿಷ್ಟ ದಿನಾಂಕ ಹೇಳಲು ಸಾಧ್ಯವಿಲ್ಲ. ನಾನು ಬ್ಯಾಂಕಿಗೆ ವಿಚಾರಿಸಿರುವುದಿಲ್ಲ ಸಾಲವನ್ನು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಫೋನ್ ಪೇ ಮಾಡಿದ್ದು ಸ್ವಲ್ಪ ನಗದಾಗಿ ಕಟ್ಟಿರುತ್ತೇನೆ ಎಂದು ಹೇಳುತ್ತಾರೆ. 2021 ರಿಂದ ಹಣವನ್ನು ಕಟ್ಟಿರುತ್ತೇನೆ ಎಂದರೆ ಕಟ್ಟಿರುವುದಿಲ್ಲ. ನನಗೆ ಬ್ಯಾಂಕಿನಲ್ಲಿ 3 ಲಕ್ಷ ಹಣವನ್ನು ವ್ಯಯಕ್ತಿಕ ಸಾಲವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ವ್ಯಯಕ್ತಿಕ ಸಾಲಕ್ಕಾಗಿ ಚೆಕ್ಕನ್ನು ಪಿರ್ಯಾದುದಾರರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ ಬೌನ್ಸ್ ಆದ ನಂತರ ನನಗೆ ತಿಳುವಳಿಕೆ ಪತ್ರ ಜಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ರಾಜಿ ಮಾಡಿಕೊಳ್ಳುತ್ತೇನೆ ಎಂದು ಹೇಳಿ ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತ ವ್ಯವಹಾರಕ್ಕೂ ಈ ಕೇಸಿಗೂ ಯಾವುದೇ ಸಂಬಂಧ ಇರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಧನ್ಯಾದಂ., ಚನ್ನರಾಯಪಟ್ಟಣ